ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಗ್ರಾಮಗಳಿಗೆ ಸಣ್ಣ ನೀರು ಸರಬರಾಜು ಯೋಜನೆ.

೨೨೫೩. ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೊಟ್ಟೂರು).—ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಪಕ್ಷ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೦೦೦ ಜನಸಂಖ್ಯೆ ಇರತಕ್ಕಂತಹ ಹಳ್ಳಿಗಳಿಗೆ ಕಿರು ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿರುವುದು ನಿಜವೆ ?

ಆ) ಇಂತಹ ಹಳ್ಳಿಗಳು ಕಡಿಮೆ ಸಂಖ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಆದರೆ ೫೦೦ ರಿಂದ ೧೦೦೦ ಜನಸಂಖ್ಯೆಯುಳ್ಳ ಹಳ್ಳಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಇ) ಹಾಗಿದ್ದಲ್ಲಿ ೫೦೦ ರಿಂದ ೧೦೦೦ ಜನಸಂಖ್ಯೆಯುಳ್ಳ ಹಳ್ಳಿಗಳಿಗೂ ಸಹ ಕೀರು ನೀರು ಸರಬರಾಜು ಯೋಜನೆಗಳನ್ನು ಹೊರಡಿಸುವ ಸಾಧ್ಯತೆ ಇದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ, ಪಂಚಾಯತ್ ರಾಜ್, ಪಕ್ಷ ಹಾಗೂ ಪಶು ಸಂಗೋಪನಾ ಮಂತ್ರಿಗಳು).—

ಅ) ನಿಜ.

ಆ) ೧೦೦೧ ರಿಂದ ೨೦೦೦ ವರೆಗೆ ೫೫೯ ಹಳ್ಳಿಗಳು ೫೦೧ ರಿಂದ ೧೦೦೦ ವರೆಗೆ ೭೩೪೨ ಹಳ್ಳಿಗಳು.

ಇ) ಇಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ನನ್ನ ಕೊನೇ ಪ್ರಶ್ನೆಗೆ ಉತ್ತರ ಕೊಡುತ್ತಾ, ಮಿನಿಮಮ್ ಐದುನೂರು ಪಾಪ್ಯುಲೇಷನ್ ಇರುವ ಗ್ರಾಮಗಳಿಗೆ ಮಿನಿ ವಾಟರ್ ಸಪ್ಲೈ ಸ್ಕೀಮ್ ಕೊಡುತ್ತೀರಾ ಎಂದರೆ ಇಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಕಾರಣ ಏನು ಎಂದೇ ನಾನು ಕೇಳುತ್ತಿರುವುದು. ೧೯೮೧ರ ಸೆನ್ಸಸ್ ಪ್ರಕಾರ ಒಂದು ಸಾವಿರ ಪಾಪ್ಯುಲೇಷನ್ ಇರತಕ್ಕ ಗ್ರಾಮಗಳಿಗೆ ಮಿನಿವಾಟರ್ ಸಪ್ಲೈ ಸ್ಕೀಮ್ ಕೊಡಲಾಗುತ್ತದೆ. ಆದರೆ ಕಳೆದ ಎಂಟು ವರ್ಷದಿಂದ ೫೦೦ ಕ್ಕಿಂತ ಹೆಚ್ಚು ಜನ ಸಂಖ್ಯೆ ಇರುವ ಗ್ರಾಮಗಳಲ್ಲೂ ಜನಸಂಖ್ಯೆ ಹೆಚ್ಚಾಗಿದೆ, ಆದುದರಿಂದ ಇವರಿಗೂ ಈ ಫೆಸಿಲಿಟೀಸ್ ಏತಕ್ಕೆ ಕೊಡಬಾರದು ಅವರು ಏನು ತಪ್ಪು ಮಾಡಿದ್ದಾರೆ. ಈ ಗ್ರಾಮಗಳಲ್ಲಿ ೧೯೮೧ ರಿಂದ ೮೮ರ ವರೆಗಿನ ಎಂಟು ವರ್ಷದ ಅವಧಿಯಲ್ಲಿ ಪಾಪ್ಯುಲೇಷನ್ ಒಂದು ಸಾವಿರವನ್ನು ಮುಟ್ಟೇ ಇಲ್ಲ ಎಂದರೆ ಈ ಹಳ್ಳಿಗಳವರನ್ನು ನಾವು ಅಪ್ರಿಷಿಯೇಟ್ ಮಾಡಬೇಕಾಗುತ್ತದೆ. ಅವರು ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಆಕ್ಟೀವ್ ಆಗಿ ಪಾರ್ಟಿಸಿಪೇಟ್ ಮಾಡಿದ್ದಾರೆ ಎಂದು ಹೇಳಬಹುದು. ಆ ರೀತಿ ಏನಾದರೂ ಆಗಿದ್ದರೆ, ಪಾಪ್ಯುಲೇಷನ್ ಒಂದು ಸಾವಿರವನ್ನು ಟಚ್ ಆಗುವ ಹಾಗೇ ಇಲ್ಲ, ಹಾಗೂ ಆವರಿಗೆ ಮಿನಿ ವಾಟರ್ ಸಪ್ಲೈ ಸ್ಕೀಮ್ ಮಾಡುವ ಹಾಗೆ ಇಲ್ಲ.

ಉಪಾಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಪಾಪ್ಯುಲೇಷನ್ ಒಂದು ಸಾವಿರದ ಕೆಳಗೆ ಇದ್ದರೆ, ಅಂದರೆ ೯೯೯ ಇದ್ದರೂ ಸಹ ಅದು ಡ್ರೋ ಒನ್ ಥೌಸಂಬಿ ಆಯಿತು. ಇವರಿಗೆ ಮಿನಿ ವಾಟರ್ ಸಪ್ಲೈ ಸ್ಕೀಮ್ ಸಿಗುವುದಿಲ್ಲ. ಇಂತಹ ಗ್ರಾಮಗಳಲ್ಲಿ ಒಂದೋ ಎರಡೋ ಬೋರ್‌ವೆಲ್‌ಗಳು ಇರುತ್ತವೆ. ಈ ಬೋರ್‌ವೆಲ್ ನೀರನ್ನೇ ಅವರು ಕುಡಿಯುವುದಕ್ಕೆ ಜಾನುವಾರುಗಳಿಗೂ ಸಹ ಬಳಸಿಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು.—ನೀವು ಉಪ ಪ್ರಶ್ನೆಗಳನ್ನು ಕೇಳಿ, ಭಾಷಣ ಮಾಡುತ್ತಾ ಇದ್ದೀರಿ.

ಶ್ರೀ ಕೆ. ವಿ. ರವೀಂದ್ರನಾಥಬಾಬು. — ದನಗಳಿಗೆ ಬೋರ್‌ವೆಲ್‌ಗಳಿಂದ ನೀರು ಕೊಡಬೇಕಾಗಿದೆ. ಅದಕ್ಕೆ ನಾನು ಹೇಳುತ್ತಿರುವುದೇನೆಂದರೆ ಮಿನಿಮಮ್‌ನ ೫೧೦ ಜನಸಂಖ್ಯೆ ಇರುವಂತಹ ಹಳ್ಳಿಗಳಿಗೂ ತಾವು ಮಿನಿ ವಾಟರ್ ಸಪ್ಲೈ ಸ್ಕೀಮ್ ಫಿಕ್ಸ್ ಮಾಡಿ ಪಾಪ್ಯುಲೇಶನ್ ಗ್ರೋತ್ ೧೯೮೧ ಸೆನ್‌ಸಸ್ ಪ್ರಕಾರ ಫಿಕ್ಸ್ ಮಾಡಿದ್ದೀರಿ. ಕುಡಿಯುವ ನೀರು ಅತಿ ಅವಶ್ಯಕವಾಗಿ ಬೇಕು. Why should you not fix at the rate of 1988 census? ೧೯೮೮ರ ಸೆನ್‌ಸಸ್ ಪ್ರಕಾರ ತಾವು ಪಾಪ್ಯುಲೇಶನ್ ಅನ್ನು ಫಿಕ್ಸ್ ಮಾಡಿಲ್ಲ. ಒಂದೊಂದು ವಿಲೇಜ್‌ನಲ್ಲಿ ಒಂದು ಸಾವಿರಕ್ಕಿಂತ ಜಾಸ್ತಿ ಜನ ಇರುತ್ತಾರೆ. ಒಂದೊಂದು ಹಳ್ಳಿಯಲ್ಲಿ ಕಡಿಮೆ ಜನಸಂಖ್ಯೆ ಇರುತ್ತಾರೆ. ಆದ್ದರಿಂದ ೫೧೦ ಜನರು ಇರುವಂತಹ ಹಳ್ಳಿಗೂ ಕುಡಿಯುವ ನೀರು ಸಿಗುವುದಿಲ್ಲ. ಒದಗಿಸಿಕೊಡಬೇಕು ? ಒಂದು ಸಾವಿರ ಜನಸಂಖ್ಯೆ ಇರಬೇಕೆಂದು ಹೇಳಿದರೆ ಆದು ಆಗುವುದಿಲ್ಲ. ಜನರಿಗೆ ಕುಡಿಯುವ ನೀರು ಸಿಗುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಕಳಕಳಿ ಮತ್ತು ಅವರ ಭಾವನೆ ನಾನು ಅರ್ಥ ಮಾಡಿಕೊಂಡಿದ್ದೇನೆ. ಇವತ್ತು ಈ ಒಂದು ಮಿನಿ ವಾಟರ್ ಸಪ್ಲೈ ಸ್ಕೀಮ್ ೧೯೮೪-೮೫ನೇ ಇಸವಿಯಲ್ಲಿ ಜಾರಿಗೆ ಬಂತು. ಈಗಾಗಲೇ ನಾನು ಹೇಳಿದ ಹಾಗೆ ಇನ್ನು ೫೨೩೯ ಹಳ್ಳಿಗಳಿಗೆ ಮಿನಿ ವಾಟರ್ ಸಪ್ಲೈ ಒದಗಿಸಿಕೊಡಬೇಕಾಗಿದೆ. ಈ ಹಳ್ಳಿಗಳಲ್ಲಿ ಸುಮಾರು ಒಂದು ಸಾವಿರಕ್ಕಿಂತ ಜಾಸ್ತಿ ಎರಡು ಸಾವಿರ ಜನ ಸಂಖ್ಯೆಗಿಂತ ಕಡಿಮೆ ಇರುವಂತಹ ಹಳ್ಳಿಗಳು. ಆಮೇಲೆ ೫೧೦ ಜನ ಸಂಖ್ಯೆಯಿಂದ ಒಂದು ಸಾವಿರ ಒಳಗೆ ಇರುವಂತಹ ಹಳ್ಳಿಗಳು ಸುಮಾರು ೭,೩೪೦ ಹಳ್ಳಿಗಳು ಇವೆ. ಇಲ್ಲಿ ಫೀಜಿಬಿಲಿಟಿ ಇದೆಯೋ ಇಲ್ಲವೋ ನೋಡಬೇಕು. ಈ ಮಿನಿ ವಾಟರ್ ಸಪ್ಲೈ ಸ್ಕೀಮ್ ತೆಗೆದುಕೊಳ್ಳಬೇಕಾದರೆ ಒಂದು ಸಾವಿರ ಜನಸಂಖ್ಯೆ ಇರಬೇಕೆಂದು ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ೭೫೦ರಿಂದ ೧೯೯೯ ಜನಸಂಖ್ಯೆ ಇರುವಂತಹ ಮಲೆನಾಡು ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಕೊಡಗು ಈ ಜಿಲ್ಲೆಗಳಲ್ಲಿ ಜನಸಂಖ್ಯೆ ಬಹಳ ಕಡಿಮೆ ಇದೆ. ಈ ಒಂದು ಸ್ಕೀಮ್ ಜಾರಿಗೆ ತಂದಾಗ ೧೯೮೬ನೇ ಇಸವಿಯಲ್ಲಿ ಇದಕ್ಕೆ ಒಂದು ಹೊಸ ಯೋಜನೆ ತಯಾರು ಮಾಡಲಾಗಿದೆ. ಆದರೆ ಹಣದ ಕೊರತೆಯಿಂದ ಇದುವರೆವಿಗೂ ನಾವು ಆ ಯೋಜನೆಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗಾಗಲೇ ನಾನು ಹೇಳಿದ ಹಾಗೆ ಒಂದು ಸಾವಿರಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರುವಂತಹ ಕಡೆ ಹೆಚ್ಚಿನ ಆದ್ಯತೆ ಕೊಟ್ಟು ನೀರಿನ ಸೌಲಭ್ಯ ಒದಗಿಸಿಕೊಟ್ಟ ನಂತರ ಮಾನ್ಯ ಸದಸ್ಯರ ಸೂಚನೆ ಏನಿದೆ ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಶ್ರೀ ಎಂ. ರಾಮಪ್ಪ.— ಮಾನ್ಯ ಅಧ್ಯಕ್ಷರೇ ಕೆಲವು ಕಡೆ ಬ್ಲಾಕೀಶ್ ವಾಟರ್ ಇರುತ್ತದೆ. ಆದರೆ ಕೆರೆ ನೀರನ್ನು ಉಪಯೋಗಿಸಿಕೊಳ್ಳಲು ಸರಿಯಾದ ವ್ಯವಸ್ಥೆ ಇರುವುದಿಲ್ಲ. ಅಂತಹ ಏರಿಯಾದಲ್ಲಿ ಏನು ಮಾಡುತ್ತೀರಿ?

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆ ಎತ್ತಿದ್ದಾರೆ. ಅದಕ್ಕೆ ನಾವು ಒಂದು ಸೂಚನೆಯನ್ನು ಕೊಟ್ಟಿದ್ದೇವೆ ಎಲ್ಲಿ ೨೫೦ ಜನಸಂಖ್ಯೆ ಇರುತ್ತದೆಯೋ ಅಲ್ಲಿ ಬ್ಲಾಕೀಶ್ ವಾಟರ್ ಇದ್ದರೆ ಅಂತಹ ಕಡೆ ಕೆರೆಗಳಿಂದ ನೀರು ಇದ್ದರೆ ಅಲ್ಲಿ ಮಿನಿ ವಾಟರ್ ಸಪ್ಲೈ ಸ್ಕೀಮ್ ಮಾಡಿಕೊಡಬೇಕೆನ್ನುವ ಸರ್‌ಕ್ಯೂಲರ್ ಹೊರಡಿಸಿದ್ದೇವೆ.

ಶ್ರೀ ಮದನ ಗೋಪಾಲ ನಾಯಕ್.— ಮಾನ್ಯ ಅಧ್ಯಕ್ಷರೇ ಮಿನಿ ವಾಟರ್ ಸಪ್ಲೈ ಸ್ಕೀಮ್‌ಗೆ ಒಂದು ಹಳ್ಳಿಯಲ್ಲಿ ಒಂದು ಸಾವಿರ ಜನಸಂಖ್ಯೆಗಿಂತ ಕಡಿಮೆ ಇರಬಾರದೆಂದು ಹೇಳುತ್ತೀರಿ. ಆದರೆ ಅಕ್ಕಪಕ್ಕದ ಎರಡು ಹಳ್ಳಿಗಳನ್ನು ಸೇರಿಸಿ ಮಿನಿ ವಾಟರ್ ಸಪ್ಲೈ ಸ್ಕೀಮ್ ಏತಕ್ಕೆ ಮಾಡಬಾರದು?

ಶ್ರೀ ಆರ್. ವಿ. ದೇಶಪಾಂಡೆ.— ಆದು ಆಗುವುದಿಲ್ಲ. It is treated as a separate village.